ಹಿಂದೀ ಮೂಲ: ಮಾಲತಿ ಜೋಶಿ
**ಕನ್ನಡಕ್ಕೆ: ಲೀಲಾ ನಾಯಿಕ**

# ಅವಲಂಬಿತರು

ವಿವೇಕ ರೆಡಿಯಾಗಿ ಹೊರಗೆ ಬಂದು ಅಮ್ಮನನ್ನು ಕೇಳಿದ: 'ಅಮ್ಮ ನಾವು ಹೊರಡಬಹುದಾ?' 'ಹೋಗಿ ಬನ್ನಿ ವಿವೇಕ, ಆದರೆ ನೋಡು, ಸ್ಕೂಟರನ್ನು ಸ್ವಲ್ಪ ನಿಧಾನವಾಗಿ ಓಡಿಸು, ಗಾಳಿಯಲ್ಲಿ ಹಾರಿಹೋದ ಹಾಗೆ ಓಡಿಸಬೇಡ.'

'ಸರಿ ಅಮ್ಮ' ವಿವೇಕ ನಗುತ್ತ ಹೇಳಿದ. ಅಷ್ಟರಲ್ಲಿ ರಶ್ಮಿ ಬಂದು ಮೆಲ್ಲಗೆ, 'ಅಮ್ಮ, ಪಲ್ಲೆ ಮಾಡಿಟ್ಟಿದ್ದೇನೆ, ಕುಕ್ಕರ್ ರೆಡಿಯಾಗಿದೆ. ಹಿಟ್ಟೂ ಕಲಸಿಯಾಗಿದೆ. ನಾನು ಬಂದ ಮೇಲೆ ಚಪಾತಿ ಮಾಡುತ್ತೇನೆ ಆಗಬಹುದಲ್ಲ. ಒಂಬತ್ತು ಗಂಟೆಗೆಲ್ಲ ನಾವು ಬಂದು ಬಿಡುತ್ತೇವೆ.'

'ನೀನೇನೂ ಯೋಚನೆ ಮಾಡಬೇಡ, ನಿಧಾನವಾಗಿ ಹೋಗಿ ಬನ್ನಿ. ನಾಲ್ಕು ಚಪಾತಿ ಮಾಡುವುದೇನೂ ಅಂಥ ಕಷ್ಟದ ಕೆಲಸವಲ್ಲ, ಪ್ರಭಾ ಮಾಡುತ್ತಾಳೆ. ನೀವು ಆರಾಮಾಗಿ ಹೋಗಿಬನ್ನಿ.'

ಅಮ್ಮನ ಮಾತು ಕೇಳಿ ನನಗೆ ಎಲ್ಲಿಲ್ಲದ ಕೋಪ ಬಂತು. ಅವರು ಹೋದೊಡನೇ ಅಮ್ಮನನ್ನು ಕೇಳಿದೆ: 'ಏನಮ್ಮ ನಾನಿಲ್ಲಿಗೆ ಚಪಾತಿ ಮಾಡಲು ಬಂದಿರುವೆನೇ?'

'ಅಯ್ಯೊ ಹೋಗಲಿ ಬಿಡಮ್ಮ, ನಾಲ್ಕು ಚಪಾತಿ ತಾನೇ. ನಾನೇ ಲಟ್ಟಿಸುತ್ತೇನೆ.'

'ಅಮ್ಮ, ಬರೀ ಚಪಾತಿ ಮಾಡುವ ಮಾತಲ್ಲ, ಅವರ ನಡವಳಿಕೆಯೇ ನನಗೆ ಸರಿಯೆನಿಸಲಿಲ್ಲ. ಹೊರಗೆ ಹೋಗುವುದಾದರೆ ಮನೆಯ ಯೋಚನೆಯನ್ನೂ ಮಾಡಬೇಡವೇ? ಎಲ್ಲ ಕೆಲಸ ಮುಗಿಸಿ ಸೆಕೆಂಡ್‌ಶೋಗೆ ಹೋಗಬಹುದಿತ್ತಲ್ಲ.'

'ನಾನೇ ಬೇಡವೆಂದೆ ಮಗಳೇ. ಈಗ ಕಾಲ ಕೆಟ್ಟುಹೋಗಿದೆ. ದಿನ ಬೆಳಗಾದರೆ ಎಂತೆಂಥ ಸುದ್ದಿಗಳನ್ನು ಕೇಳುತ್ತೇವೆ. ಹೆಣ್ಣುಮಕ್ಕಳು ರಾತ್ರಿಯ ಹೊತ್ತಿನಲ್ಲಿ ಹೊರಗಡೆ ಹೋಗುವುದೇ ಕಷ್ಟವಾಗಿದೆ. ನಾನು ಹೇಳಿದೆನೆಂದೇ ವಿವೇಕ ಅರ್ಧ ದಿನ ರಜೆ ಹಾಕಿ ಬಂದ. ಪಾಪ, ಇಲ್ಲವಾದರೆ ಹೋಗಲಾಗುತ್ತಿತ್ತೇ?'

'ಅವನು ಬೇಗ ಬಂದಾಗಲೇ ಏನೋ ಪ್ರೋಗ್ರಾಮ್ ಹಾಕಿಕೊಂಡಿದ್ದಾರೆಂದು ಗೊತ್ತಾಯಿತು. ಆದರೆ ಅವರಾಗಲೀ ನೀನಾಗಲೀ ಅವರು ಪಿಕ್ಚರಿಗೆ ಹೋಗುವ ಬಗ್ಗೆ ನನಗೆ ಒಂದು ಸುಳಿವನ್ನೂ ಕೊಡಲಿಲ್ಲ ಅಲ್ಲವೇ? ಅಲ್ಲಮ್ಮ, ನೀನೂ ಬರುವೆಯಾ? ಎಂದು ನನ್ನನ್ನೊಂದು ಮಾತು ಕೇಳಿದ್ದರೆ ನಾನೇನು ಅವರ ಹಿಂದೆ ಹೋಗಿಬಿಡುತ್ತಿದ್ದೆನೇ?' 'ರಶ್ಮಿ ನಿನ್ನನ್ನೂ ಕೇಳುವೆನೆಂದಳು ಪ್ರಭಾ, ನಾನೇ ಬೇಡವೆಂದೆ. ಅವರ ಮಧ್ಯೆ ನೀನು ಹೋಗುವುದೇನು ಚೆನ್ನಾಗಿರುತ್ತದಾ, ಅಲ್ಲದೇ ಈಗಿನ ಸಿನಿಮಾಗಳೋ.' ಅಮ್ಮ ಸೊಸೆಯ ಪರವಾಗಿ ವಕಾಲತ್ ವಹಿಸಿ ಮಾತನಾಡಿದ್ದು ನನಗೆ ಸ್ವಲ್ಪವೂ